ದಿನಾಂಕಃ **01.08.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : 2ನೇ ಎದುರುದಾರರ ಪರ ವಕೀಲರಿಂದ :</u>**

ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.

Authorization Letter ನ್ನು ಹಾಜರುಪಡಿಸಿರುತ್ತೇನೆ, ಅದನ್ನು **ನಿ.ಆರ್-1** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಿಂದ :</u>**

ನಾನು 20 ವರ್ಷಗಳಿಂದ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಪೊಲೀಸರ ಅಂತಿಮ ವರದಿಯನ್ನು ಪರಿಶೀಲಿಸಿರುತ್ತೇನೆ. ಲಾರಿ ಚಾಲಕ ರಸ್ತೆ ಮಧ್ಯದಲ್ಲಿ ಲಾರಿಯನ್ನು ನಿಲ್ಲಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಲಾರಿ ಕೆಟ್ಟು ಹೋಗಿ ನಿಂತಿದ್ದರಿಂದ ಅಪಘಾತವಾಗಿರುತ್ತದೆ ಎನ್ನುತ್ತಾರೆ. ಪೊಲೀಸರು ಲಾರಿ ಚಾಲಕನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಮೃತರ ವಿರುದ್ಧವೂ ಸಹ ಸಲ್ಲಿಸಿರುತ್ತಾರೆ ಎನ್ನುತ್ತಾರೆ. ಸದರಿ ಲಾರಿ ಆ ಸಂದರ್ಭದಲ್ಲಿ ಕೆಟ್ಟು ನಿಂತಿತ್ತು ಎಂದು ಪೊಲೀಸರು ಸಲ್ಲಿಸಿರುವ ಐ.ಎಂ.ವಿ.ವರದಿಯಲ್ಲಿ ಇಲ್ಲ ಎಂದರೆ ಸಾಕ್ಷಿ ಐ.ಎಂ.ವಿ.ವರದಿಯಲ್ಲಿ ಡ್ಯಾಮೇಜನ್ನು ಮಾತ್ರ ತೋರಿಸುತ್ತಾರೆ, ಕೆಟ್ಟು ಹೋದ ಬಗ್ಗೆ ನಮೂದಿಸುವುದಿಲ್ಲ ಎನ್ನುತ್ತಾರೆ. ಲಾರಿ ಕೆಟ್ಟು ನಿಂತಿತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಸಾಕ್ಷಿ ಅಂತಿಮ ವರದಿಯಲ್ಲಿ ಆ ಬಗ್ಗೆ ನಮೂದು ಇರುತ್ತದೆ ಎನ್ನುತ್ತಾರೆ. ಸದರಿ ಲಾರಿ ಕೆಟ್ಟಿತ್ತು ಎಂದು ತೋರಿಸಲು ಮೆಕ್ಯಾನಿಕ್ ಅಥವಾ ಗ್ಯಾರೇಜ್ ರವರ ವರದಿ ಇರುತ್ತದೆಯೇ ಎಂದರೆ ಅದರ ಅವಶ್ಯಕತೆ ಇಲ್ಲ. ಸದರಿ ರಸ್ತೆ 2 ಪಥದ ರಸ್ತೆ ಎಂದರೆ ಸರಿ. ಪೊಲೀಸರ ಸ್ಕೆಚ್ ಪ್ರಕಾರ 2 ಪಥಗಳ ಪೈಕಿ ಸದರಿ ಲಾರಿಯು ರಸ್ತೆಯ ಬಲಭಾಗದ ಲೇನ್ ನಲ್ಲಿತ್ತು, ಎಡಭಾಗದ ಲೇನ್ ಖಾಲಿಯಿತ್ತು, ಲಾರಿ ಡಿವೈಡರ್ ಲೇನ್ ಪಕ್ಕದಲ್ಲಿತ್ತು.

**2.** ಲಾರಿಯ ಚಾಲಕ ಪೊಲೀಸರ ಅಂತಿಮ ವರದಿಯನ್ನು ಪ್ರಶ್ನಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಮೃತರು ಹೆಲ್ಮೆಟ್ ಧರಿಸಿರಲಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ತಲೆಗೆ ಗಾಯವಾಗಿತ್ತು ಎನ್ನುತ್ತಾರೆ. ಹೆಲ್ಮೆಟ್ ಧರಿಸಿದ್ದರೂ ತಲೆಗೆ ಗಾಯವಾಗುತ್ತದೆ ಎಂದರೆ ಸರಿಯಲ್ಲ. ಲಾರಿ ಚಾಲಕ ಪಾರ್ಕಿಂಗ್ ಲೈಟನ್ನು ಹಾಕಿ ವಾಹನವನ್ನು ಅಲ್ಲಿ ನಿಲ್ಲಿಸಿರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ಮಹಜರ್ ನಲ್ಲಿ ನಮೂದು ಇರುತ್ತದೆ ಎನ್ನುತ್ತಾರೆ. ಪೊಲೀಸರು ಅಪಘಾತವಾದ ಮಾರನೇ ದಿವಸ ಮಹಜರ್ ಮಾಡಿರುತ್ತಾರೆ ಎಂದರೆ ಸರಿ. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ, ದ್ವಿಚಕ್ರ ವಾಹನದ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ವಿಮೆ ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಸವಾರಿ ಮಾಡುತ್ತಿದ್ದ ದೀಪಕ್ ರವರು ಮೃತಪಟ್ಟಿದ್ದು, ಅವರಿಗೆ ನಮ್ಮ ಕಂಪನಿಯಿಂದ ನ್ಯಾಯಾಲಯದ ಆದೇಶದಂತೆ ಶೇಕಡಾ 50 ರಷ್ಟು ಪರಿಹಾರ ಕೊಟ್ಟಿರುತ್ತೇವೆ ಎಂದರೆ ಸರಿ.

**<u>ಪಾಟೀ ಸವಾಲು : 4ನೇ ಎದುರುದಾರರ ಪರ ವಕೀಲರಿಂದ :</u>**

ಸದರಿ ಅರ್ಜಿ ಕಲಂ.166 ರಡಿಯಲ್ಲಿ ದಾಖಲಾಗಿದ್ದು, ಬೈಕ್ ಚಾಲಕ ಸದರಿ ಬೈಕಿನ ವಿಮೆಗೆ 3rd Party ಆಗುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**